

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಉಹುದ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–12–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ ـ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ اِيَّاكَ نَعْبُدُ وَاِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಖುತ್‌ಬಗಳಲ್ಲಿ ಇತ್ತೀಚಿಗೆ ಉಹುದ್ ಯುದ್ಧದ ಪ್ರಸ್ತಾಪ ನಡೆಯುತ್ತಿದೆ. ಪ್ರಸ್ತಾಪಿಸಲಾದಂತೆ ಯುದ್ಧದಲ್ಲಿ ಮುಸ್ಲಿಮರು ಸತ್ಯನಿಷೇಧಿಗಳಿಗೆ ಬಹಳಷ್ಟು ನಷ್ಟ ಉಂಟುಮಾಡಿದರು ಮತ್ತು ಸತ್ಯನಿಷೇಧಿಗಳು ಪರಾರಿಯಾಗಲು ನಿರ್ಬಂಧಿತರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ)ರ ಶಕ್ತವಾದ ಆದೇಶವಿದ್ದೂ ಪರ್ವತದ ಹಾದಿಯಲ್ಲಿ ನೇಮಿಸಲ್ಪಟ್ಟವರಲ್ಲಿ ಅನೇಕರು ಆ ಜಾಗವನ್ನು ಬಿಟ್ಟು ಕೆಳಗಿಳಿದಾಗ ಶತ್ರುಗಳು ಆ ಮಾರ್ಗದಿಂದ ದಾಳಿ ನಡೆಸಿದರು ಮತ್ತು ಮುಸ್ಲಿಮರಿಗೆ ತೀವ್ರ ನಷ್ಟ ಉಂಟುಮಾಡಿದರು.

ಇದರ ಸ್ವಲ್ಪ ವಿಶದ ವಿವರಣೆ ಹೀಗಿದೆ: ಮುಶ್ರಿಕರ ಧ್ವಜವಾಹಕರು ಒಬ್ಬೊಬ್ಬರಾಗಿ ವಧಿಸಲ್ಪಟ್ಟಾಗ ಮುಶ್ರಿಕರು ಬೆನ್ನು ತೋರಿಸಿ ಓಡಲು ಆರಂಭಿಸಿದರು. ಮುಶ್ರಿಕರು ಪರಾರಿ ಆಗುತ್ತಿರುವುದನ್ನು ಮುಸ್ಲಿಮರು ಕಂಡಾಗ, ಅವರು ಮುಶ್ರಿಕರನ್ನು ಬೆನ್ನಟ್ಟುವುದರಲ್ಲಿ ಮತ್ತು ಯುದ್ಧ ಸಂಪತ್ತನ್ನು ಒಟ್ಟುಗೂಡಿಸುವುದರಲ್ಲಿ ನಿರತರಾದರು. ಅದೇ ವೇಳೆ ಯಾವುದೇ ಅವಸ್ಥೆಯಲ್ಲೂ ತಮ್ಮ ಜಾಗವನ್ನು ಬಿಡದಿರಿ ಎಂದು ಆದೇಶ ನೀಡಿ ಪರ್ವತದ ಹಾದಿಯಲ್ಲಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಬಿಲ್ಲುಗಾರರ ತಂಡ ಯುದ್ಧ ಸಂಪತ್ತನ್ನು ಒಟ್ಟುಗೂಡಿಸಲಿಕ್ಕಾಗಿ ತಮ್ಮ ಜಾಗಬಿಟ್ಟು ಯುದ್ಧ ಮೈದಾನಕ್ಕೆ ಹೋದರು ಎಂದು ಹೇಳಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಅಮೀರಾಗಿ ನೇಮಿಸಿದ ಹಝ್ರತ್ ಅಬ್ದುಲ್ಲಾಹ್ ಬಿನ್ ಜುಬೈರ್(ರ) ಓಡಿ ಹೋಗುವವರನ್ನು ತಡೆದರು. ಆದರೆ ಅವರು ನಿಲ್ಲಲಿಲ್ಲ. ಹತ್ತಕ್ಕಿಂತಲೂ ಕಡಿಮೆ ಸಹಾಬಿಯರು ಅಬ್ದುಲ್ಲಾಹ್ ಬಿನ್ ಝುಬೈರ್(ರ)ರ ಜೊತೆ ಆ ಜಾಗದಲ್ಲೇ ಸ್ಥಿರವಾಗಿ ನಿಂತರು.

ಪರ್ವತದ ಹಾದಿಯನ್ನು ಬಿಟ್ಟು ಹೋಗಿದ್ದ ಸಹಾಬಿಯರು ಯುದ್ಧ ಸಂಪತ್ತನ್ನು ಒಂದುಗೂಡಿಸುವ ಅವಸರದಲ್ಲಿ ಇದ್ದರು ಎಂದು ಹೆಚ್ಚಿನ ಚರಿತ್ರೆಗಾರರು ಹಾಗೂ ಇತಿಹಾಸದ ಗ್ರಂಥಗಳಲ್ಲಿ ಮತ್ತು ಹದೀಸುಗಳಲ್ಲಿ ಬರೆಯಲಾಗಿದೆ. ಅದೇ ರೀತಿಯಲ್ಲಿ ಆ ಸಹಾಬಿಯರು ಯುದ್ಧದಲ್ಲಿ ಲಭಿಸಿದ ಸಂಪತ್ತನ್ನು ಪಡೆಯಲಿಕ್ಕಾಗಿ ಬೇಗನೇ ಹೋಗಲು ಬಯಸಿದ್ದರು ಎಂದು ಸೂರ ಆಲಿ ಇಮ್ರಾನಿನ 153ನೇ ವಚನದ ವ್ಯಾಖ್ಯಾನದಲ್ಲಿ ವ್ಯಾಖ್ಯಾನಗಾರರು ಕೂಡ ಬರೆದಿರುವರು. ಆದರೆ ಲೌಕಿಕ ಅಭಿಲಾಷೆಗಳಿಗಾಗಿ ಕಣಿವೆಯನ್ನು ಬಿಟ್ಟು ಹೋಗಿದ್ದರು ಎಂದು ಆ ಸಹಾಬಿಯರ ಬಗ್ಗೆ ಹೇಳುವುದು ಸರಿಯೆಂದು ಅನಿಸುತ್ತಿಲ್ಲ. ಅವರಿಗೆ ಯುದ್ಧ ಸಂಪತ್ತಿನ ಮೇಲೆ ಬಹಳ ಆಸೆಯಿತ್ತು ಎಂದು ಹೇಳುವುದು ಅಥವಾ ಯೋಚಿಸುವುದು ಕೂಡ ಅವರ ಮಹಿಮೆಗೆ ವಿರುದ್ಧವಾದ ಸಂಗತಿಯಾಗಿದೆ. ಅವರಂತು ತಮ್ಮ ಪತ್ನಿ, ಮಕ್ಕಳು, ತಮ್ಮ ಸಂಪತ್ತನ್ನು ಮಾತ್ರವಲ್ಲ ತಮ್ಮ ಜೀವವನ್ನು ಕೂಡ ಹಝ್ರತ್ ಪೈಗಂಬರ್(ಸ)ರಿಗಾಗಿ ಸಮರ್ಪಿಸಿದ್ದರು. ಯುದ್ಧ ಜಯಿಸಿದರೆ ಯುದ್ಧ ಸಂಪತ್ತು ಲಭಿಸುವುದು ಒಂದು ಹೆಚ್ಚುವರಿ ಸಂಗತಿ ಆಗಿರಬಹುದು. ಆದರೆ ಸಹಾಬಿಯರ ಉದ್ದೇಶ ಮತ್ತು ಗುರಿ ಯುದ್ಧ ಸಂಪತ್ತು ಖಂಡಿತವಾಗಿಯೂ ಆಗಿರಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಸತ್ಯನಿಷೇಧಿಗಳ ಮೇಲೆ ಸ್ಪಷ್ಟವಾದ ವಿಜಯ ಲಭಿಸಿದ್ದನ್ನು ಮತ್ತು ಮುಸ್ಲಿಮರು ಸತ್ಯನಿಷೇಧಿಗಳನ್ನು ಓಡಿಸುವುದನ್ನು ಪರ್ವತದ ಹಾದಿಯಲ್ಲಿದ್ದ ಸಹಾಬಿಯರು ಕಂಡಾಗ ಅವರು ಸಹ ಯುದ್ಧದ ವಿಜಯದ ಖುಶಿಯ ಆಚರಣೆಯಲ್ಲಿ ಭಾಗವಹಿಸಲು ಹಂಬಲಿಸಿದರು. ನಮ್ಮ ಸಹೋದರರು ಜಿಹಾದಿನಲ್ಲಿ ನೇರವಾಗಿ ಭಾಗವಹಿಸುತ್ತಿದ್ದಾರೆ ಮತ್ತು ನಾವು ಈ ಪರ್ವತದ ಹಾದಿಯಲ್ಲಿ ಸುಮ್ಮನೆ ನಿಂತಿದ್ದೇವೆ ಎಂದು ಅವರಿಗೆ ಬಹುಶಃ ಅನಿಸಿರಬಹುದು. ಆದ್ದರಿಂದ ಯುದ್ಧದ ಕೊನೆಯ ನಿಮಿಷಗಳಲ್ಲಾದರೂ ಜಿಹಾದಿನಲ್ಲಿ ನೇರವಾಗಿ ಭಾಗಿಯಾಗಲು ಮತ್ತು ವಿಜಯದ ಖುಶಿಯ ಆಚರಣೆಯಲ್ಲಿ ಪಾಲ್ಗೊಳ್ಳಲು ಅವರು ಪರ್ವತದ ಹಾದಿಯನ್ನು ಬಿಟ್ಟು ಯುದ್ಧ ಮೈದಾನಕ್ಕೆ ಧುಮುಕಿದರು.

ಸೂರ ಆಲಿ ಇಮ್ರಾನಿನ 153ನೇ ವಚನದ ವ್ಯಾಖ್ಯಾನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಟಿಪ್ಪಣಿ ಬರೆದಿರುವರು. ಅದು ಇಲ್ಲಿಯ ವರೆಗೂ ಪ್ರಕಾಶನಗೊಂಡಿಲ್ಲ. ಅದರಲ್ಲಿ ಅವರು ಹೇಳುತ್ತಾರೆ: ಸತ್ಯ ಸಂಗತಿಯೇನೆಂದರೆ, ಪರ್ವತದ ಹಾದಿಯಲ್ಲಿ ನೇಮಿಸಲ್ಪಟ್ಟಿದ್ದ ಸಹಾಬಿಯರಿಗೂ ಉಹುದ್ ಯುದ್ಧದಲ್ಲಿ ಪಾಲ್ಗೊಳ್ಳುವ ಅಭಿಲಾಷೆಯಿತ್ತು. ಇದು ಕೂಡ ಒಂದು ಲೌಕಿಕ ಅಭಿಲಾಷೆಯೇ ಆಗಿದೆ. ನಾವು ಯುದ್ಧದಲ್ಲಿ ನೇರವಾಗಿ ಭಾಗಿಯಾಗಿಲ್ಲ ಎಂದು ಅವರಿಗೆ ಅನಿಸುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸಬೇಕು ಎಂಬುದು ಅವರಿಗೆ ಲಭಿಸಿದ ಆದೇಶವಾಗಿತ್ತು.

ನಿಮ್ಮ ಅಧಿಕಾರಿ ಮತ್ತು ಅವರ ಸಂಗಡಿಗರು ಪರಲೋಕವನ್ನು ಬಯಸುತ್ತಿದ್ದರು ಎಂದು ಈ ವಚನದಲ್ಲಿ ಹೇಳಲಾಗಿದೆ. ಎಂದರೆ ಅಂತಿಮ ಪರಿಣಾಮ ಮತ್ತು ಫಲಿತಾಂಶವನ್ನು ಅವರು ತಮ್ಮ ದೃಷ್ಟಿಯಲ್ಲಿ ಇರಿಸಿಕೊಂಡಿದ್ದರು. ಪರ್ವತದ ಹಾದಿಯನ್ನು ಬಿಟ್ಟು ಬಂದರೆ ಅದರ ಪರಿಣಾಮ ಉತ್ತಮವಾಗಿರದು ಎಂದು ಅವರಿಗೆ ಗೊತ್ತಿತ್ತು. ಅದಕ್ಕೆ ವಿರುದ್ಧವಾಗಿ ಪರ್ವತದ ಹಾದಿಯಲ್ಲಿದ್ದ ಕೆಲವು ಸಹಾಬಿಯರದ್ದು ಬಾಹ್ಯವಾದ ನೋಟವಾಗಿತ್ತು. ಈ ಅರ್ಥವನ್ನು ಅವರ ಕೃತ್ಯಕ್ಕೆ ನೀಡುವುದು ಅವರ ಕೆಲಸಗಳಿಂದ ಮತ್ತು ತ್ಯಾಗಗಳಿಂದ ಸ್ಪಷ್ಟವಾಗುವ ಅವರ ಮಹಿಮೆಗೆ ಅನುಯೋಜ್ಯವಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಹೇಳುತ್ತಾರೆ: ಈ ವಚನದಲ್ಲಿ ಲೌಕಿಕತೆ ಎಂದು ಹೇಳಿದ್ದನ್ನು ವ್ಯಾಖ್ಯಾನಗಾರರು ಯುದ್ಧ ಸಂಪತ್ತು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಅದು ಸರಿಯಲ್ಲ. ಸಹಾಬಿಯರು ತಾತ್ಕಾಲಿಕ ವಿಜಯದ ಬಗ್ಗೆ ಗಮನ ಹೊಂದಿದ್ದರು. ಇಲ್ಲಿ ಲೌಕಿಕತೆ ಎಂಬುದರ ಅರ್ಥ,

ಮೊದಲಿಗೆ ಉಂಟಾದ ವಿಜಯವಾಗಿದೆ. ಪರ್ವತದ ಹಾದಿಯಲ್ಲಿದ್ದ ಸಹಾಬಿಯರ ನೋಟ ಅದರ ಮೇಲಾಗಿತ್ತು. ಆದರೆ ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ದೃಷ್ಟಿ ಪರಲೋಕದಲ್ಲಾಗಿತ್ತು. ಎಂದರೆ ಅವರು ಹಝ್ರತ್ ಪೈಗಂಬರ್(ಸ)ರ ಅನುಸರಣೆಯಲ್ಲಿ ಅತ್ಯಂತ ಹಿರಿಯ ವಿಜಯವನ್ನು ಕಾಣುತ್ತಿದ್ದರು.

ಅಂತೂ ಪರ್ವತದ ಹಾದಿ ಖಾಲಿಯಾಯಿತು ಮತ್ತು ಅಬ್ದುಲ್ಲಾಹ್ ಬಿನ್ ಜುಬೇರ್(ರ) ಬೆರಳೆನಿಕೆಯಷ್ಟು ಸಂಗಡಿಗರ ಜೊತೆಗೆ ಅಲ್ಲಿ ಬಾಕಿ ಉಳಿದರು. ಪರ್ವತದ ಹಾದಿ ಖಾಲಿಯಾಗಿರುವುದನ್ನು ಮಕ್ಕಾದ ಸತ್ಯನಿಷೇಧಿಗಳ ಪರಾರಿಯಾದ ಸೈನ್ಯದಲ್ಲಿದ್ದ, ಅಲ್ಲಿಯ ವರೆಗೂ ಮುಸ್ಲಿಮನಾಗಿರದ ಖಾಲಿದ್ ಬಿನ್ ವಲೀದ್ ಕಂಡರು. ಅವರು ಇಕ್ರಿಮ ಬಿನ್ ಅಬೂಜಹಲಿನ ಜೊತೆಗೆ ಕುದುರೆ ಸವಾರರ ಒಂದು ತುಕಡಿಯೊಂದಿಗೆ ಆ ಪರ್ವತದ ಹಾದಿಯ ಮೇಲೆ ದಾಳಿ ನಡೆಸಿದರು. ಅವರ ದಾಳಿ ಎಷ್ಟು ಪ್ರಬಲ ಮತ್ತು ತೀವ್ರವಾಗಿತ್ತು ಎಂದರೆ, ಒಂದೇ ಹಲ್ಲೆಯಿಂದ ಪರ್ವತದ ಹಾದಿಯಲ್ಲಿದ್ದ ಸಹಾಬಿಯರು ಶಹೀದ್ ಆದರು. ಈ ದಾಳಿಯ ಬಗ್ಗೆ ಗೊತ್ತಿರದ ಮುಸ್ಲಿಮರು ಯುದ್ಧ ಮೈದಾನದಲ್ಲಿ ಯುದ್ಧ ಸಂಪತ್ತನ್ನು ಒಟ್ಟುಗೂಡಿಸುವುದರಲ್ಲಿ ಮತ್ತು ಸತ್ಯನಿಷೇಧಿಗಳನ್ನು ಬಂಧಿಸುವುದರಲ್ಲಿ ನಿರತರಾಗಿದ್ದರು. ಆದ್ದರಿಂದ ಆ ದಾಳಿಯನ್ನು ಅವರಿಗೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ ಮತ್ತು ಈ ಅಚಾನಕ್ಕಾದ ದಾಳಿಯಿಂದ ಮುಸ್ಲಿಮರು ಚದುರಿ ಹೋದರು.

ಯುದ್ಧದ ತಕ್ಕಡಿ ಅಚಾನಕ್ಕಾಗಿ ಮಕ್ಕಾದ ಸತ್ಯನಿಷೇಧಿಗಳ ಪರವಾಗಿ ವಾಲಿಕೊಂಡಿತು. ಪರಾರಿಯಾಗುತ್ತಿದ್ದ ಸತ್ಯನಿಷೇಧಿಗಳು ಕೂಡ ಈ ಹೊಸ ಸ್ಥಿತಿಗತಿಯ ಕಾರಣದಿಂದ ಮರಳಿ ಬಂದರು. ಹೀಗೆ ಮುಂದಿನಿಂದಲೂ ಹಿಂದಿನಿಂದಲೂ ಸತ್ಯನಿಷೇಧಿಗಳು ಮುಸ್ಲಿಮರನ್ನು ಸುತ್ತುವರೆದರು. ಮುಸ್ಲಿಮರಿಗೆ ತಮ್ಮ ಸೇನೆಯ ಕ್ರಮೀಕರಣವನ್ನು ನೆಲೆನಿಲ್ಲಿಸಲು ಸಾಧ್ಯವಾಗಲಿಲ್ಲ. ಅವರು ಯುದ್ಧ ಸಂಪತ್ತನ್ನು ತಮ್ಮ ಕೈಗಳಿಂದ ಎಸೆದರು. ಈ ಯುದ್ಧದಲ್ಲಿ ಹಝ್ರತ್ ಹಂಝ(ರ) ಸಹ ಶಹೀದ್ ಆದರು. ಅವರು ಎರಡು ಖಡ್ಗಗಳೊಂದಿಗೆ ಹಝ್ರತ್ ಪೈಗಂಬರ್(ಸ)ರ ಮುಂದೆ ಯುದ್ಧ ಮಾಡುತ್ತಿದ್ದರು. ಅವರು ಅತ್ಯಂದ ಧೀರತೆಯಿಂದ ಕೆಲವೊಮ್ಮೆ ಮುಂದೆ ಸಾಗುತ್ತಿದ್ದರು ಮತ್ತು ಕೆಲವೊಮ್ಮೆ ಹಿಂದೆ ಸರಿಯುತ್ತಿದ್ದರು. ಅದೇ ವೇಳೆ ಅವರು ಒಮ್ಮೆ ಅಚಾನಕ್ಕಾಗಿ ಜಾರಿಬಿದ್ದರು. ಆಗ ವಹ್‌ಶೀ ಗುಲಾಮನು ಈಟಿಯನ್ನು ಎಸೆದು ಅವರನ್ನು ಶಹೀದ್ ಮಾಡಿದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಝ್ರತ್ ಹಂಝ(ರ) ಶಹೀದ್ ಆದ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಬಹಳ ದುಃಖಿತರಾದರು. ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ತಾಯಿಫ್ ಯುದ್ಧದ ನಂತರ ಹಝ್ರತ್ ಹಂಝ(ರ)ರ ಕೊಲೆಗಾರನಾದ ವಹ್‌ಶೀ ಗುಲಾಮನು (ಅವರು ಅನಂತರ ಇಸ್ಲಾಂ ಧರ್ಮ ಸ್ವೀಕರಿಸಿದ್ದರು) ಹಝ್ರತ್ ಪೈಗಂಬರ್(ಸ)ರ ಮುಂದೆ ಬಂದಾಗ ಹಝ್ರತ್ ಪೈಗಂಬರ್(ಸ) ಆತನನ್ನು ಕ್ಷಮಿಸಿದರು. ಆದರೆ ಕೊಲೆಗಾರನಾದ ವಹ್‌ಶಿ ನನ್ನ ಮುಂದೆ ಬರದಿರಲಿ ಎಂದು ಹಝ್ರತ್ ಹಂಝ(ರ)ರೊಡನೆ ಇದ್ದ ಪ್ರೀತಿಗೆ ಗೌರವ ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು.

ಆ ವೇಳೆ ಆ ವಹ್‌ಶೀ ತನ್ನ ಮನಸ್ಸಿನಲ್ಲಿ ಹೀಗೆ ಪ್ರತಿಜ್ಞೆ ಮಾಡಿಕೊಂಡರು. ಯಾವ ಕೈಯಿಂದ ನಾನು ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರನ್ನು ವಧಿಸಿದೆನೋ ಅದೇ ಕೈಯಿಂದ ಇಸ್ಲಾಮಿನ ಯಾವನಾದರೂ ದೊಡ್ಡ ಶತ್ರುವನ್ನು ವಧಿಸುವ ವರೆಗೂ ನಾನು ನೆಮ್ಮದಿಯಿಂದ ಇರಲಾರೆ. ಹೀಗೆ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಅವರು ಯಮಾಮ ಯುದ್ಧದಲ್ಲಿ ಪ್ರವಾದಿತ್ವದ ಸುಳ್ಳುವಾದಿ ಮುಸೈಲಿಮ ಕದ್ದಾಬ್‌ನನ್ನು ಕೊಂದು ತನ್ನ ಶಪಥವನ್ನು ಈಡೇರಿಸಿದರು.

ಹಝ್ರತ್ ಹಂಝ(ರ)ರ ಮೃತಶರೀರವನ್ನು ಅಪಮಾನಿಸಲಾಗಿತ್ತು. ಅವರ ಶರೀರವನ್ನು ಬಹಳವಾಗಿ ವಿರೂಪಗೊಳಿಸಲಾಗಿತ್ತು. ಈ ವೇದನಾಜನಕ ದೃಶ್ಯವನ್ನು ನೋಡಿ ಹಝ್ರತ್ ಪೈಗಂಬರ್(ಸ)ರಿಗೆ ತೀವ್ರ ದುಃಖ ಉಂಟಾಯಿತು. ಹಝ್ರತ್ ಹಂಝ(ರ)ರ ಸಹೋದರಿಯಾದ ಹಝ್ರತ್ ಸಫಿಯ(ರ) ಬಲಶಾಲಿಯಾದ ಮಹಿಳೆಯಾಗಿದ್ದಳು. ಯುದ್ಧ ಕೊನೆಗೊಂಡಾಗ ಅವರು ಬಹಳ ವೇಗವಾಗಿ ಯುದ್ಧ ಮೈದಾನದ ಕಡೆಗೆ ಧಾವಿಸುತ್ತಿದ್ದರು. ವಿರೂಪಗೊಳಿಸಲಾದ ಮುಸ್ಲಿಮರ ಮೃತದೇಹಗಳ ಸಮೀಪಕ್ಕೆ ಅವರು ತಲುಪುತ್ತಿದ್ದರು. ಮಹಿಳೆಯೊಬ್ಬಳು ಈ ನೋವುಭರಿತ ದೃಶ್ಯವನ್ನು ನೋಡುವುದನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟಿರಲಿಲ್ಲ. ಹಾಗೆ ಹಝ್ರತ್ ಸಫಿಯ(ರ)ರನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದರು. ಹಝ್ರತ್ ಸಫಿಯ(ರ)ರನ್ನು ತಡೆಯಲು ಪ್ರಯತ್ನಿಸಲಾಯಿತು. ಆದರೆ ಅವರನ್ನು ತಡೆಯಲಾಗಲಿಲ್ಲ. ಈ ಮೃತದೇಹಗಳನ್ನು ನೋಡಬಾರದು ಎಂದು ಹಝ್ರತ್ ಪೈಗಂಬರ್(ಸ) ಆದೇಶ ನೀಡಿರುವರು ಎಂದು ಅವರೊಡನೆ ಹೇಳಲಾಯಿತು. ಆಗ ಅವರು ಅದರಿಂದ ಹಿಂದೆ ಸರಿದರು. ತನ್ನ ಬಳಿಯಿಂದ ಎರಡು ಬಟ್ಟೆಗಳನ್ನು ಕೊಟ್ಟು ಹಝ್ರತ್ ಸಫಿಯ(ರ) ಹೀಗೆ ಹೇಳಿದರು: ನಾನು ಇವುಗಳನ್ನು ನನ್ನ ಸಹೋದರ ಹಂಝರಿಗೆ ತಂದಿದ್ದೇನೆ. ಏಕೆಂದರೆ ಅವರು ಶಹೀದ್ ಆಗಿರುವರು ಎಂಬ ಮಾಹಿತಿ ನನಗೆ ಲಭಿಸಿತ್ತು. ತನ್ನ ಸಹೋದರ ಹಂಝ(ರ)ರ ಮೃತದೇಹವನ್ನು ನೋಡಲು ಹಝ್ರತ್ ಸಫಿಯ(ರ) ಹಝ್ರತ್ ಪೈಗಂಬರ್(ಸ)ರೊಡನೆ ಮನವಿ ಮಾಡಿದರು. ಹಝ್ರತ್ ಪೈಗಂಬರ್(ಸ) ಅನುಮತಿ ಕೊಟ್ಟರು. ತನ್ನ ಸಹೋದರನ ವಿರೂಪಗೊಂಡ ಮೃತದೇಹವನ್ನು ನೋಡಿದಾಗ ಹಝ್ರತ್ ಸಫಿಯ(ರ) ಭಾವುಕರಾದರು. ಅವರ ಕಣ್ಣುಗಳಿಂದ ಕಣ್ಣೀರು ಸುರಿಯಿತು.

(ಯುದ್ಧದ ವಿವರಣೆ ಮುಂದುವರೆಯುವುದು ಎಂದು ಹುಝೂರ್ ಹೇಳಿದರು.)

(ಹುಝೂರ್ ಹೇಳಿದರು:) ಪೆಲಸ್ತೀನಿಯರಿಗಾಗಿ ದುಆ ಮಾಡಲು ನಾನು ಹೇಳುತ್ತಾ ಇದ್ದೇನೆ. ದುಆ ಮಾಡಿರಿ. ದೌರ್ಜನ್ಯದ ವಿರುದ್ಧ ನಿಜವಾದ ಪ್ರತಿಕ್ರಿಯೆ ನಡೆಸಲು ಲೋಕಕ್ಕೆ ಅಲ್ಲಾಹನು ಸೌಭಾಗ್ಯ ನೀಡಲಿ. ದೌರ್ಜನ್ಯ ಆಗುತ್ತಿದೆ, ದೌರ್ಜನ್ಯ ಆಗುತ್ತಿದೆ ಎಂದು ಹೇಳಿ ಸ್ವಲ್ಪ ಮಟ್ಟಿಗೆ ಸ್ವರವೆತ್ತಲು ಜನರು ಪ್ರಾರಂಭಿಸಿದ್ದಾರೆ. ಆದರೂ ಎಲ್ಲರೂ ಇಸ್ರೇಲಿ ಸರ್ಕಾರವನ್ನು ಭಯಪಡುತ್ತಿದ್ದಾರೆ ಎಂದು ತೋರುತ್ತಿದೆ. ಅಥವಾ ಸಹಜವಾಗಿಯೇ ಮುಸ್ಲಿಮರ ವಿರುದ್ಧ ಪಾಶ್ಚಿಮಾತ್ಯ ಲೋಕದ ಜನರಿಗೆ ಇರುವ ಹಗೆಯ ಕಾರಣದಿಂದ ಮುಸ್ಲಿಮರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕೊನೆಗೊಳ್ಳದಿರಲಿ ಎಂದೋ ಅಥವಾ ಕೈಗೊಳ್ಳಬೇಕಾದ ರೀತಿಯಲ್ಲಿ ಪ್ರಯತ್ನ ನಡೆಯದಿರಲಿ ಎಂದೋ ಪಾಶ್ಚಿಮಾತ್ಯ ಲೋಕದ ಜನರು ಬಯಸುತ್ತಾರೆ. ಮುಗ್ಧ ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂಬುದನ್ನು ಅವರು ಲೆಕ್ಕಿಸುವುದಿಲ್ಲ.

ಆದ್ದರಿಂದ ಹೇಗಿದ್ದರೂ ಅವರ ಮೇಲೆ ನಮಗೆ ಹೆಚ್ಚಿನ ಭರವಸೆ ಇರಿಸಲು ಸಾಧ್ಯವಲ್ಲ. ಆದರೂ ನಾವು ಪ್ರಯತ್ನ ಮಾಡುತ್ತಿರಬೇಕು. ಅವರನ್ನು ಮನವರಿಕೆ ಮಾಡಿಸುತ್ತಾ ಇರಬೇಕು ಮತ್ತು ದುಆಗಳನ್ನು ಮಾಡುತ್ತಿರಬೇಕು. ಮುಸ್ಲಿಮ್ ದೇಶಗಳಿಗೂ ತಮ್ಮ ಧ್ವನಿಯನ್ನು ಉಚ್ಚಗೊಳಿಸಲು, ನಿಜವಾಗಿಯೂ ಒಗ್ಗಟ್ಟಿನಿಂದ ಈ ದೌರ್ಜನ್ಯದ ವಿರುದ್ಧ ದನಿಯೆತ್ತಲು ಮತ್ತು ಇದನ್ನು ಕೊನೆಗೊಳಿಸಲು ಪ್ರಯತ್ನಿಸುವಂತಾಗಲು ಅಲ್ಲಾಹನು ಧೈರ್ಯ ನೀಡಲಿ.

(ಅನಂತರ ಹುಝೂರ್ ಇಬ್ಬರು ದಿವಂಗತರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿಕೊಂಡು ಅವರ ಬಗ್ಗೆ ಪ್ರಸ್ತಾಸಿದರು.)

ಮೊದಲನೆಯ ಪ್ರಸ್ತಾಪ ಗಾಝದ ನಿವಾಸಿಯಾದ ಸನ್ಮಾನ್ಯ ಶೇಖ್ ಅಹ್ಮದ್ ಹುಸೇನ್ ಅಬೂ ಸರ್ದಾನ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ ಗಾಝದಲ್ಲಿ ಇಸ್ರೇಲಿನ ಬಾಂಬ್ ದಾಳಿಯ ವೇಳೆ ನಮ್ಮ ಈ ಹಿರಿಯ ಅಹ್ಮದೀ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಗಾಝದ ಪ್ರಸ್ತುತ ಯುದ್ಧದಲ್ಲಿ ಶಹೀದ್ ಆದ ಮೊದಲ ಅಹ್ಮದಿಯಾಗಿರುವರು. ದಿವಂಗತರಿಗೆ ಸುಮಾರು 94 ವರ್ಷ ವಯಸ್ಸು ಇತ್ತು. ದಿವಂಗತರು ಅಲ್‌ಅಝ್‌ಹರ್ ಯೂನಿವರ್ಸಿಟಿಯಿಂದ ತೇರ್ಗಡೆಯಾದ ಪಂಡಿತರಲ್ಲಿ ಒಬ್ಬರಾಗಿದ್ದರು. 1970ರಲ್ಲಿ ದಿವಂಗತರು ದೈವಿಕ ಸಹಾಯದಿಂದ ಬೈಅತ್ ಮಾಡಿ ಅಹ್ಮದಿಯ್ಯತ್ ಪ್ರವೇಶಿಸಿದರು. ದಿವಂಗತರು ಸ್ನೇಹಮಯಿ, ಖಿಲಾಫತನ್ನು ಪ್ರೀತಿಸುವ, ಪವಿತ್ರ ಖುರ್‌ಆನಿನೊಂದಿಗೆ ಅನುರಕ್ತಿ ಹೊಂದಿದ್ದ ನಿಷ್ಠಾವಂತ ಅಹ್ಮದಿಯಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಅವರ ಜೊತೆಗೆ ಇದ್ದ ಎರಡನೇ ಪತ್ನಿ ಕೂಡ ಈ ದಾಳಿಯಿಂದ ಗಾಯಾಳು ಆಗಿರುವರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಪತ್ನಿಗೂ ಶಮನ ನೀಡಲಿ. ಅಲ್ಲಾಹನು ಅವರ ದುಆಗಳನ್ನು ಪೆಲಸ್ತೀನಿಯರ ಪರವಾಗಿಯೂ ಸ್ವೀಕಾರ ಮಾಡಲಿ. ಅಲ್ಲಿ ಶಾಂತಿ ಸ್ಥಾಪನೆಯಾಗಲಿ ಮತ್ತು ಅಲ್ಲಿಯ ಜನರಿಗೆ ಹಝ್‌ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಅಲ್ಲಾಹನು ಸೌಭಾಗ್ಯ ನೀಡಲಿ.

ಎರಡನೆಯ ಪ್ರಸ್ತಾಪ ಕೆನ್ಯಾದ ಸನ್ಮಾನ್ಯ ಉಸ್ಮಾನ್ ಅಹ್ಮದ್ ಗಾಕೋರಿಯ ಸಾಹಿಬ್‌ರದ್ದಾಗಿದೆ. ದಿವಂಗತರು ಕೆಲವು ದಿನಗಳ ಹಿಂದೆ ನಿಧನಗೊಂಡರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಅನೇಕ ದಶಕಗಳಷ್ಟು ದೀರ್ಘ ಕಾಲ ಜಮಾಅತಿನ ಸೇವೆ ಮಾಡಿದ್ದರು. ಜಮಾಅತಿನ ಅನೇಕ ಗ್ರಂಥಗಳನ್ನು ಸ್ವಾಹೀಲಿ ಭಾಷೆಗೆ ಅವರು ಅನುವಾದಿಸಿದ್ದರು. ದಿವಂಗತರು ಉನ್ನತ ಸ್ವಭಾವಿ, ಶಿಸ್ತಿನ ವ್ಯಕ್ತಿ, ತಹಜ್ಜುದ್ ನಿರ್ವಹಿಸುವವರು, ನಿಯತವಾಗಿ ಚಂದಾಗಳನ್ನು ಪಾವತಿ ಮಾಡುವವರು, ಮುಬಲ್ಲಿಗರನ್ನು ಗೌರವಿಸುವವರು, ಅತಿಥಿ ಸತ್ಕಾರಿ, ಸಾತ್ವಿಕ ಹಿರಿಯ ವ್ಯಕ್ತಿಯಾಗಿದ್ದರು. ದಿವಂಗತರ ಎಲ್ಲ ಮಕ್ಕಳು ಯಾವುದಾದರೂ ವಿಧದಲ್ಲಿ ಜಮಾಅತಿನ ಸೇವೆ ಮಾಡುವ ಸೌಭಾಗ್ಯವನ್ನು ಪಡೆಯುತ್ತಿರುವರು. (ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak'**, Islamabad, Tilford, UK.* On 22-12-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon